# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **303/2018**

ಚಾಸಾ-1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 07-03-2026

| | | |
|---|---|---|
| ಹೆಸರು | : | ರೇವಣಸಿದ್ದಪ್ಪ |
| ತಂದೆಯ ಹೆಸರು | : | ಪ್ರಭು |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಅತ್ತನೂರು |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 9 ರಿಂದ 12 ಪರಿಚಯ ಇರುತ್ತಾರೆ. ಚಾಸಾ 13 ಮೃತನ ಮಗಳು. ಚಾಸಾ 14 ಮೃತನ ಅಳಿಯ. ಚಾಸಾ 15 ರಿಂದ 17 ಸಂಬಂಧಿಕರು ಇರುತ್ತಾರೆ. ಮೃತ ನಾಗಣ್ಣ ಮತ್ತು ಮಹಾದೇವಿ ನನ್ನ ಚಿಕ್ಕಪ್ಪ ಚಿಕ್ಕಮ್ಮ ಇರುತ್ತಾರೆ.

ಈಗ ಸುಮಾರು ವರ್ಷಗಳ ಹಿಂದೆ ಮೃತ ನಾಗಣ್ಣನಿಗೆ ರಸ್ತೆ ಅಪಘಾತ ಆಗಿರುತ್ತದೆ. ಅಪಘಾತ ಸಮಯದಲ್ಲಿ ನಾನು ಹಿಂದೆ. ಅಪಘಾತ ಪಡಿಸಿದ ವಾಹನ ನಂಬರ ನೋಡಿದ್ದು ಆ ಕುರಿತು ಹೇಳಿ ದೂರು ನೀಡಿರುತ್ತೇನೆ. ಅಪಘಾತವಾದ ಎರಡು ದಿನಗಳ ನಂತರ ನಾಗಣ್ಣ ತೀರಿಕೊಂಡಿರುತ್ತಾನೆ. ಇಷ್ಟು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 12-10-2017 ರಂದು ನಾನು ಮತ್ತು ಚಾಸಾ 9 ರವರು ಹೊಲದಿಂದ ಬರುತ್ತಿದ್ದೆವು ಎಂದರೆ ಸರಿ. ಅದೇ ಸಮಯಕ್ಕೆ ಮೃತನಾಗಣ ಮತ್ತು ಮಹಾದೇವಿ ರವರು ಹೊಲದಿಂದ ಕೆಲಸ ಮುಗಿಸಿಕೊಂಡು ಎತ್ತಿನ ಬಂಡಿಯಲ್ಲಿ ಬರುತ್ತಿದ್ದರು ಎಂದರೆ ಸರಿ. ನಬಿಸಾಬ ಹೊಲದ ಹತ್ತಿರ ಮೃತನ ಎತ್ತಿನ ಬಂಡಿ ಬರುತ್ತಿದ್ದಾಗ ಕಲಬುರಗಿಯಿಂದ ಅಫಜಲಪುರಕೆ ಬರುತ್ತಿದ್ದ ಬಸ್ಸಿನ ಚಾಲಕನು ಅತೀವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಡಿಕ್ಕಿಪಡಿಸಿರುತಾನೆ ಎಂದರೆ ಸರಿ. ಆಗ ನಾನು ಚಾಸಾ 9 ರಿಂದ 11 ರವರು ಸೇರಿ ಅಪಘಾತ ಸ್ಥಳಕ್ಕೆ ಹೋಗಿ ನೋಡಿ ಗಾಯಾಳುಗಳಿಗೆ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿ. ಯುನೈಟೆಡ ಆಸ್ಪತ್ರೆ ಕಲಬುರಗಿಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಗಾಯಾಳು ನಾಗಣ್ಣ ಮತ್ತು ಮಹಾದೇವಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಅಪಘಾತಕ್ಕೆ ಬಸ್ಸಿನ ಚಾಲಕನ ಅತಿವೇಗ ಮತ್ತು ನಿಷ್ಕಾಳಜಿತನದಿಂದ ಚಲಾನೆ ಮಾಡಿದ ಡಿಕ್ಕಿಪಡಿಸಿ ಅಪಘಾತ ಪಡಿಸಿ ಮೃತ ಪಟ್ಟಿರುತ್ತಾರೆ ಎಂದು ದೂರು ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು ಸಾಕ್ಷಿಯೂ ಅದನ್ನು ಗುರುತಿಸಿದ್ದು ಅದನ್ನು ನಿಪಿ **1** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು.

ದಿಃ 15-10-2017 ರಂದು ಪೋಲಿಸರು ನನಗೆ ಠಾಣೆಗೆ ಕರೆಸಿ ಅಪಘಾತ ಪಡಿಸಿದ ಚಾಲಕನನ್ನು ತೋರಿಸಿರುತ್ತಾರೆ ಎಂದರೆ ಸರಿ. ಆಗ ನಾನು ಆತನಿಗೆ ಗುರುತಿಸಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ಮೃತರ ಶವದ ಭಾವಚಿತ್ರಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ-**2** ಮತ್ತು **3** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಅಪಘಾತ ಪಡಿಸಿತು ಎಂದು ಹೇಳುವ ಬಸ್ಸಿನ ಭಾವಚಿತ್ರಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ-**4** ರಿಂದ **7** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SSP** ವಕೀಲರಿಂದಃ-</u>

ಮೃತು ಎತ್ತಿನ ಗಾಡಿಯಲ್ಲಿ ಹೊಲದಿಂದ ಮನೆಗೆ ಹೋಗುತ್ತಿದ್ದರು. ಬಸ್ಸು ಹಿಂದಗಡೆಯಿಂದ ಬರುತ್ತಿತ್ತು ಎಂದರೆ ಸರಿ. ನಾನು ಅವರ ಹಿಂದೆ ಬರುತ್ತಿದ್ದೆ. ನಮ್ಮ ಮತ್ತು ಎತ್ತಿನ ಗಾಡಿ ಮಧ್ಯ 30 ಅಡಿ

ಅಂತರ ಇರಬಹುದು. ನಾವು ಹೋಗುವಾಗ ಎದುರುಗಡೆಯಿಂದ ಯಾವುದೇ ವಾಹನಗಳು ಬಂದಿರಲಿಲ್ಲ. ಅಪಘಾತವಾದಾಗ ಸಮಯ ಸಂಜೆ 6 ರಿಂದ 6-15 ಆಗಿರಬಹುದು. ಆಗ ಮೊಬ್ಬು ಕತ್ತಲು ಇತ್ತು. ಬಸ್ಸು ನಮ್ಮನ್ನು ದಾಟಿ ಮುಂದೆ ಹೋಗಿ ಅಪಘಾತ ಪಡಿಸಿತ್ತು. ನಾನು ಬಸ್ಸಿನ ಹಿಂದಗಡೆ ಇರುವುದರಿಂದ ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನಾನು ನೋಡಿಲ್ಲ ಎಂದರೆ ಸರಿ. ನಿಪಿ-1 ಪೋಲಿಸರು ನನಗೆ ಓದಿ ಹೇಳಿರುತ್ತಾರೆ. ಆದರೆ ಈಗ ನೆನಪಿಲ್ಲ. ಪೋಲಿಸರು ನನಗೆ ಠಾಣೆಗೆ ಕರೆಸಿ ಮರುಹೇಳಿಕೆ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರಿಗೆ ವಿಮೆ ಪರಿಹಾರ ಕೊಡಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ